**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| **ಸಿ.ಸಿ. ನಂ** | **20615/2021** |
| **ಪಿ.ಡಬ್ಲ್ಯೂ** | **01** |
| **ದಿನಾಂಕ** | **03.06.2026** |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ. ಎನ್.ಪಿ. ವಕೀಲರಿಂದ**

ಆರೋಪಿಯ ತಂದೆಯ ಹೆಸರು ವೆಂಕಟೇಶ್. ಅವರ ವಿಳಾಸ ಸಿ.ಕೆ.ಪಾಳ್ಯ ಗ್ರಾಮ, ಸಕಲವಾರ ಅಂಚೆ. ಆರೋಪಿ ನನಗೆ 20 ವರ್ಷಗಳಿಂದ ಪರಿಚಯ. ಆ ಬಗ್ಗೆ ನಾನು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಅವರು ಎಸ್‌ಎಲ್‌ವಿ ಕನ್ ನಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ವ್ಯವಹಾರಕ್ಕಾಗಿ ನನ್ನ ಬಳಿ ಸಾಲ ಪಡೆದಿದ್ದರು. ದಿನಾಂಕಃ 27.07.2018 ರಲ್ಲಿ ನಾನು ಅವರಿಗೆ ಸಾಲ ಕೊಟ್ಟಿರುತ್ತೇನೆ. ಆರೋಪಿ ನನಗೆ ಒಂದು ವರ್ಷದಲ್ಲಿ ಕೊಡುತ್ತೇನೆಂದು ಹೇಳಿದ್ದರು. ಆರೋಪಿಗೆ ಸಾಲ ಕೊಟ್ಟಿರುವ ವಿಚಾರ ನನ್ನ ಗಂಡನಿಗೆ ತಿಳಿದಿದೆ. ಆರೋಪಿಗೆ ಸಾಲ ಕೊಟ್ಟಾಗ ನನ್ನ ಗಂಡ ಇದ್ದರು. ಆರೋಪಿಗೆ ನಾನು ರೂ.500/- ಮುಖಬೆಲೆಯ ನೋಟುಗಳನ್ನು ಕೊಟ್ಟಿರುತ್ತೇನೆ. ನಿಪಿ-9 ರಲ್ಲಿ ಪದ್ಮ ಎಂಬುವವರಿಗೆ ಸಾಲ ಕೊಟ್ಟಿದ್ದೇನೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ನಾನು ಆರೋಪಿಗೆ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಪದ್ಮ ಆರೋಪಿಯ ಹೆಂಡತಿ ಆಗಿದ್ದು ಇಬ್ಬರು ಬಂದಿದ್ದರು ಎಂದು ನುಡಿದಿರುತ್ತಾರೆ. ನಿಪಿ-9 ರಲ್ಲಿ ಆ ರೀತಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪದ್ಮ ರವರು ನಿಪಿ-9 ರಲ್ಲಿ ನಮೂದಿಸಿದ ನಿವೇಶನವನ್ನು ತೆಗೆದುಕೊಂಡಿದ್ದರು ಹಾಗೂ ಅದರಲ್ಲಿ ಮನೆ ಕಟ್ಟುವ ಸಲುವಾಗಿ ನನ್ನ ಬಳಿ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ಗಂಡ ಹೆಂಡತಿ ಇಬ್ಬರು ಬಂದು ಸಾಲ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಆಗ ನಿಪಿ-9 ರಂತೆ ಕರಾರು ಪತ್ರವನ್ನು ಪದ್ಮರವರು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದ ಜೊತೆಗೆ ಮೂರು ಚೆಕ್ಕುಗಳನ್ನು ಪದ್ಮ ರವರಿಂದ ನಾನು ಭದ್ರತೆಗಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಕಡೆಯಿಂದ ಚೆಕ್ಕುಗಳನ್ನು ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ-9 ಕರಾರು ಪತ್ರ ಮಾಡಿಕೊಟ್ಟಾಗ ಪದ್ಮ ರವರು ನಿಪಿ-9 ರಲ್ಲಿ ನಮೂದಿಸಿರುವ ನಿವೇಶನವನ್ನು ನನ್ನ ಸ್ವಾಧೀನಕ್ಕೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ತದನಂತರ, ಪದ್ಮರವರು ನನಗೆ ಕೊಡಬೇಕಾದ ಹಣವನ್ನು ಮರುಪಾವತಿ ಮಾಡಿ ಸದರಿ ನಿವೇಶನದ ಸ್ವಾಧೀನವನ್ನು ಪಡೆದರು ಎಂದರೆ ಸರಿಯಲ್ಲ. ನಂತರ ಸದರಿ ಪದ್ಮರವರು ಸದರಿ ನಿವೇಶನವನ್ನು ಬೇರೆಯವರಿಗೆ ಮಾರಾಟ ಮಾಡಿದರು ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ತನ್ನ ಸಹಿಯನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿ ಅದು ನನ್ನದೆ ಎಂದು ಒಪ್ಪಿರುತ್ತಾರೆ. ನಿಪಿ-9 ರಲ್ಲಿ ಆರೋಪಿಯ ಸಹಿಯನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪದ್ಮರವರಿಂದ ಪಡೆದಿದ್ದ ಮೂರು ಚೆಕ್ಕುಗಳಲ್ಲಿ ಎರಡು ಚೆಕ್ಕುಗಳನ್ನು ಈ ಪ್ರಕರಣದಲ್ಲಿ ಹಾಗೂ ಇನ್ನೊಂದು ಚೆಕ್ಕನ್ನು ನನ್ನ ಅಕ್ಕನ ಮುಖಾಂತರ ಸಿ.ಸಿ.20614/2021 ಎಂದು ದಾಖಲು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರಲ್ಲಿರುವ ಸಹಿಗಳು ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿ-5 ನೋಟೀಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ರೂ.6,00,000/- ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಅದರ ತಿರುವಳಿಗಾಗಿ ಯಾವುದೇ

ಚೆಕ್ಕುಗಳು ಆರೋಪಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪದ್ಮರವರು ನನಗೆ ಕೊಡಬೇಕಾದ ಸಾಲ ತೀರಿಸಿದ್ದರು ಸಹ, ಆರೋಪಿಗೆ ತೊಂದರೆ ಕೊಡಬೇಕೆಂದು ಈ ಸುಳ್ಳು ಪ್ರಕರಣ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಆನೇಕಲ್.**